**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.**

**ಪಿಡಬ್ಲ್ಯೂ:1**

**ಎಸ್.ಸಿ. ಸಂಖ್ಯೆ: 537/22 ಸಿಡಬ್ಲ್ಯೂ:1**

**ಸಾಕ್ಷಿದಾರರ ಹೆಸರು** : ಮುರಳೀಧರ ನಾಯಕ್
**ತಂದೆ ಹೆಸರು** : ಶ್ರೀನಿವಾಸ ನಾಯಕ್
**ವಯಸ್ಸು** : 59
**ವೃತ್ತಿ** : ವ್ಯಾಪಾರ
**ವಾಸ** : ನಾಡಾ ಗ್ರಾಮ

**ದಿನಾಂಕ: 05-09-2024 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ**

ನನಗೆ ಇಬ್ಬರು ಮಕ್ಕಳು, ಮೃತ ಸ್ಫೂರ್ಥಿ ನನ್ನ ಮೊದಲನೇ ಮಗಳು, ಎರಡನೇಯವನು ಮಗ. ನನ್ನ ಮಗಳು ಸ್ಫೂರ್ಥಿ ಕುಂದಾಪುರದ ಭಂಡಾರ್ ಕಾರ್ಸು ಕಾಲೇಜಿನಲ್ಲಿ ಬಿ.ಸಿ.ಎ ಪಧವಿ ಮಾಡಿರುತ್ತಾಳೆ. ನನಗೆ ಆರೋಪಿತರ ಪರಿಚಯ ಇದೆ. 1 ನೇ ಆರೋಪಿ ನನ್ನ ಮಗಳೊಂದಿಗೆ ನಿಶ್ಚಿತಾರ್ಥ ಮಾಡಿಕೊಂಡಿರುವ ಯುವಕ ಗೋವರ್ಧನ, 2 ನೇ ಆರೋಪಿ ಆತನ ತಾಯಿ ರೇಖಾ ಮತ್ತು 3 ನೇ ಆರೋಪಿ ಆತನ ಅಣ್ಣ ಯೋಗೀಶ್ ಇರುತ್ತಾರೆ. ಅವರ ಮನೆ ಉಡುಪಿ ನಿಟ್ಟೂರಿನ ಹನುಮಂತ ನಗರದಲ್ಲಿದೆ. ಗೋವರ್ಧನ ಎಂ.ಎಸ್.ಡಬ್ಲ್ಯು ಪಧವೀಧರನಾಗಿರುತ್ತಾನೆ. ಗೋವರ್ಧನ ನೊಂದಿಗೆ ನನ್ನ ಮಗಳನ್ನು ಮದುವೆ ಮಾಡುವುದಾಗಿ ಎರಡೂ ಕುಟುಂಬದ ಗುರು ಹಿರಿಯರ ಸಮ್ಮುಖದಲ್ಲಿ ಮಾತುಕತೆ ನಡೆದು ದಿ:16-08-2020 ರಂದು ನಾಡಾಗುಡ್ಡೆಯಂಗಡಿಯಲ್ಲಿರುವ ಸೀತಾರಾಮ ಕಲ್ಯಾಣ ಮಂಟಪದಲ್ಲಿ ನಿಶ್ಚಿತಾರ್ಥ ಮಾಡಿರುತ್ತೇವೆ. ಅದೇ ಪ್ರಕಾರ ದಿ:14-02-2021 ರಂದು ವಿವಾಹ ನಡೆಸುವುದಾಗಿ ತ್ರಾಸಿಯಲ್ಲಿರುವ ಕೊಂಕಣ ಖಾರ್ವಿ ಮಹಾ ಸಭಾದ ಸಭಾಭವನದ ಹಾಲ್ ನ್ನು ಕಾಯ್ದಿರಿಸಿದ್ದೆವು. ನನ್ನ ಮಗಳು ಮತ್ತು 1 ನೇ ಆರೋಪಿ ಮೊಬೈಲಿನಲ್ಲಿ ಮಾತನಾಡಿಕೊಂಡಿದ್ದು, ಇಬ್ಬರೂ ಜೊತೆಯಲ್ಲಿ ತಿರುಗಾಡುತ್ತಿದ್ದರು. ನಿಶ್ಚಿತಾರ್ಥದ ಸಂದರ್ಭದಲ್ಲಿ ಹುಡುಗನಿಗೆ ಒಂದು ಚಿನ್ನದ ಉಂಗುರ, ಬ್ರೇಸ್‌ಲೇಟ್ ಮತ್ತು ಒಂದು ಚಿನ್ನದ ಸರವನ್ನು ನಾವು ಉಡುಗೊರೆಯಾಗಿ ನೀಡಿದ್ದೆವು. ಹುಡುಗಿಗೆ ಮದುವೆ ಸಮಯದಲ್ಲಿ 25

ಪಾವನ್ ಚಿನ್ನ ಹಾಕುವುದಾಗಿ ಮಾತುಕತೆಯಾಗಿತ್ತು. ನನ್ನ ಮಗಳೊಂದಿಗೆ 1ನೇ ಆರೋಪಿ ತಿರುಗಾಡುವ ಸಮಯದಲ್ಲಿ ರೂ:10,00,000-00 (ಹತ್ತು ಲಕ್ಷ) ಹಣ ಮತ್ತು 50 ಪಾವನ್ ಚಿನ್ನ ಕೊಡಬೇಕು ಅದನ್ನು ಕೊಟ್ಟರೆ ಮಾತ್ರ ಮದುವೆಯಾಗುತ್ತೇನೆ ಇಲ್ಲವಾದರೆ ನಾನು ಮದುವೆಯಾಗುವುದಿಲ್ಲ ಅಂತ ಹೇಳುತ್ತಿದ್ದ. ಅಲ್ಲದೇ 1ನೇ ಆರೋಪಿ ತಾನು ಸಿಗರೇಟು ಸೇದುತ್ತೇನೆ, ತನಗೆ ಬೇರೆ ಹುಡುಗಿಯರೊಂದಿಗೆ ಲವ್ ಇದೆ, ಮದುವೆಯಾದ ನಂತರ ನೀನು ನಾನು ಹೇಳಿದ ಹಾಗೆ ಬೇರೆಯವರ ಜೊತೆ ಸಹಾ ನೀನು ಮಲಗಬೇಕಾಗುತ್ತದೆ ಅಂತ ಸಹಾ 1 ನೇ ಆರೋಪಿ ನನ್ನ ಮಗಳಿಗೆ ಹೇಳಿದ್ದ. ನನ್ನ ಮಗಳಿಗೆ ಹೊರಗಡೆ ಕರೆದುಕೊಂಡು ಹೋದಾಗ ಅವಳ ಬಲ ಕೆನ್ನೆಗೆ ಕಚ್ಚಿ ಅವಳಿಗೆ ಗಾಯ ಮಾಡಿರುತ್ತಾನೆ ಆ ಕಲೆ ಅವಳು ಸಾಯುವವರೆಗೂ ಇತ್ತು. ಅದಲ್ಲದೇ ನನ್ನ ಮಗಳಿಗೆ ಅವಳ ನಗ್ನ ಚಿತ್ರವನ್ನು ಸಹಾ ತನಗೆ ಕಳುಹಿಸಿಕೊಡುವಂತೆ 1ನೇ ಆರೋಪಿ ಹೇಳಿದ್ದ. ಈ ವಿಷಯ ಎಲ್ಲಾ ನನ್ನ ಮಗಳು ನನ್ನ ಹೆಂಡತಿಗೆ ಹೇಳುವಾಗ ನಾನು ಅದನ್ನು ಕೇಳಿಸಿಕೊಂಡಿರುತ್ತೇನೆ.

ಅಕ್ಟೋಬರ್ 10, 2020 ರಂದು 1ನೇ ಆರೋಪಿ ನನ್ನ ಮೊಬೈಲಿಗೆ ಕರೆ ಮಾಡಿ ನನ್ನ ಮಗಳನ್ನು ಕರೆದುಕೊಂಡು ಅವರ ಮನೆಗೆ ಬರಲು ತಿಳಿಸಿದ. ಆ ಪ್ರಕಾರ ನಾನು ಮಾರನೆ ದಿವಸ ದಿ:11-10-2020 ಕ್ಕೆ ನಾನು 1ನೇ ಆರೋಪಿತನ ಮನೆಗೆ ಮಗಳೊಂದಿಗೆ ಹೋದೆ. ಅಲ್ಲಿ ನ್ಯಾಯಾಲಯದ ಮುಂದಿರುವಂತಹಾ ಮೂರೂ ಜನ ಆರೋಪಿತರು ಇದ್ದರು. ಅವರು ಮದುವೆ ಪೂರ್ವದಲ್ಲಿ 10 ಲಕ್ಷ ಹಣ ಕೊಡಬೇಕು ಮತ್ತು 50 ಪಾವನ್ ಚಿನ್ನ ಕೊಡಬೇಕು ಅಂತ ನಮ್ಮ ಮುಂದೆ ಬೇಡಿಕೆ ಇಟ್ಟರು. ಇಲ್ಲವಾದರೆ ಮದುವೆಯಾಗುವುದಿಲ್ಲ ನಿಮ್ಮ ಮಗಳನ್ನು ಕರೆದುಕೊಂಡು ಹೋಗಿ ಅಂತ ಹೇಳಿದರು. ಆಗ ನಾನು ಅಷ್ಟು ಹಣ ಮತ್ತು ಚಿನ್ನ ಕೊಡಲಿಕ್ಕೆ ಆಗುವುದಿಲ್ಲ ಆ ಸ್ಥಿತಿಯಲ್ಲಿ ನಾವು ಇಲ್ಲಾ ಅಂತ ಆರೋಪಿತರ ಜೊತೆಗೆ ನೇರವಾಗಿ ಹೇಳಿ ನಾನು ನನ್ನ ಮಗಳನ್ನು ಕರೆದುಕೊಂಡು ಮನೆಗೆ ಬಂದೆ.

ದಿನಾಂಕ:21-10-2020 ಕ್ಕೆ 1ನೇ ಆರೋಪಿ ನನ್ನ ಮೊಬೈಲಿಗೆ ಕರೆ ಮಾಡಿ ನಾವು ಕೇಳಿದಷ್ಟು ಹಣ ಮತ್ತು ಚಿನ್ನ ಕೊಟ್ಟರೆ ಮಾತ್ರ ನಾನು ಮದುವೆಯಾಗುತ್ತೇನೆ, ಇಲ್ಲವಾದರೆ ನಾನು ಮದುವೆಯಾಗುವುದಿಲ್ಲ ಅಂತ ಹೇಳಿದ. ಆಗ ನಾನು ಅವನಿಗೆ ಈಗ ನಿಶ್ಚಿತಾರ್ಥ ಆಗಿದೆ ಬೇರೆ ಗಂಡು ಹುಡುಕುವುದು ಕಷ್ಟ ಇದೆ ಮದುವೆ ಮಾಡಿಕೊಳ್ಳಿ ಅಂತ ಕೇಳಿದಾಗ 1ನೇ ಆರೋಪಿ ಅಷ್ಟು ಹಣ ಮತ್ತು ಚಿನ್ನ ಕೊಟ್ಟರೆ ಮಾತ್ರ ಮದುವೆಯಾಗುತ್ತೇನೆ ಇಲ್ಲವಾದರೆ ನಿಮ್ಮ ಮಗಳಿಗೆ ವಿಷ ಕೊಟ್ಟು ಸಾಯಿಸಿ ಅಂತ ಹೇಳಿದ.

ನಂತರ 1 ನೇ ಆರೋಪಿ ನನ್ನ ಮಗಳಿಗೂ ಸಹಾ ಫೋನು ಮಾಡಿ ನೀನು ವಿಷ ತಿಂದು ಸಾಯಿ ನಾನು ನಿನ್ನನ್ನು ಮದುವೆಯಾಗುವುದಿಲ್ಲ ಅಂತ ಹೇಳಿದ. ಸದ್ರಿ ವಿಷಯದಿಂದ ನನ್ನ ಮಗಳು ಮಾನಸಿಕವಾಗಿ ತುಂಬಾ ನೊಂದುಕೊಂಡು ತುಂಬಾ ಕುಗ್ಗಿ ಹೋಗಿದ್ದಳು.

ದಿ:06-11-2020 ರಂದು ಮನೆಯಲ್ಲಿ ನನ್ನ ಮಗಳು ತಲೆ ತಿರುಗಿ ಬೀಳುವುದನ್ನು ಕಂಡು ಮೊದಲು ಸುರೇಶ್ ಕುಮಾರ್ ಶೆಟ್ಟಿ ರವರ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಅವರು ಮಣಿಪಾಲ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಸೂಚಿಸಿದ್ದರಿಂದ ನಂತರ ನನ್ನ ಮಗಳನ್ನು ಮಣಿಪಾಲ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ನಾವು ಮನೆಯಿಂದ ಅವಳನ್ನು ಕರೆದುಕೊಂಡು ಹೋಗುವಾಗ ಅವಳು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ ಹಾಗೂ ಮಣಿಪಾಲ ಆಸ್ಪತ್ರೆಯಲ್ಲಿಯೂ ಸಹಾ ಅವಳು ಮಾತನಾಡುವ ಸ್ಥಿತಿಯಲ್ಲಿ ಇಲ್ಲದೇ ಇರುವುದನ್ನು ಕಂಡು ವೈದ್ಯರು ಅವಳು ವಿಷ ಪದಾರ್ಥ ಸೇವನೆ ಮಾಡಿರುವುದಾಗಿ ತಿಳಿಸಿ ಚಿಕಿತ್ಸೆ ನೀಡಿದರು. ನಂತರ ಅವಳಿಗೆ ಚಿಕಿತ್ಸೆಗೆ ಫಲಕಾರಿಯಾಗದೇ ಅವಳು ಅದೇ ದಿವಸ ರಾತ್ರಿ ಮೃತಪಟ್ಟಿರುತ್ತಾಳೆ.

ನನ್ನ ಮಗಳ ಸಾವಿನ ವಿಷಯ ಕುರಿತು ಗಂಗೊಳ್ಳಿ ಪೋಲೀಸು ಠಾಣೆಯಲ್ಲಿ ನಾನು ವಿಷಯ ತಿಳಿಸಿದ್ದು, ಅವರು ನನ್ನ ಅರ್ಜಿಯನ್ನು ಯುಡಿಆರ್ ಅಂತ ಸ್ವೀಕರಿಸಿದ್ದು ಯುಡಿಆರ್ ಇದನ್ನು ನಿಪಿ-1 ಎಂದೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು.

ನನ್ನ ಮಗಳ ಅಕಾಲಿಕ ಮರಣದಿಂದ ನಮಗೆ ಆಘಾತವಾಗಿದ್ದು, ಮತ್ತು ಧಾರ್ಮಿಕ ವಿಧಿ ವಿಧಾನಗಳನ್ನು ಮುಗಿಸಲು ಸಮಯ ಬೇಕಾಗಿದ್ದರಿಂದ ಅದೆಲ್ಲಾ ಮುಗಿದ ನಂತರ ನಾನು ಪುನಃ ಪೋಲೀಸು ಠಾಣೆಗೆ ನನ್ನ ಮಗಳ ಸಾವಿಗೆ ಆರೋಪಿತರೇ ಕ್ರಮ ಅವರ ಮೇಲೆ ಕ್ರಮ ಕೈಗೊಳ್ಳಬೇಕು ಅಂತ ಆರೋಪಿತರ ವಿರುದ್ಧ ಪೋಲೀಸರಿಗೆ ಫಿರ್ಯಾದಿ ನೀಡಿದ್ದು, ಫಿರ್ಯಾದಿಯನ್ನು ನಿಪಿ-2 ಎಂದೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ನಾನು ಫಿರ್ಯಾದಿ ನೀಡಿದ ಮಾರನೆ ದಿವಸ ಪೋಲೀಸರು ನಮ್ಮ ಮನೆಗೆ ಸ್ಥಳ ಮಹಜರಿಗಾಗಿ ಬಂದಿರುತ್ತಾರೆ. ಆಗ ಪಂಚರಾಗಿ ವಾಸುದೇವ ಆಚಾರಿ ಮತ್ತು ಶಂಕರ ಆಚಾರಿ ಇದ್ದರು. ಪಂಚರ ಸಮಕ್ಷಮ ಪೋಲೀಸರು ನಾನು ತೋರಿಸಿದ ಸ್ಥಳದಲ್ಲಿ ಮಧ್ಯಾಹ್ನ 12.30 ಗಂಟೆ ಸಮಯಕ್ಕೆ ಪಂಚನಾಮೆ ಮಾಡಿರುತ್ತಾರೆ. ಸದ್ರಿ ಪಂಚನಾಮೆ ನೋಡುತ್ತಿದ್ದು, ಅದನ್ನು ನಿಪಿ-3 ಎಂದೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-3 ಎ ಎಂದು ಗುರುತಿಸಲಾಯಿತು. ನಿಪಿ-3 ಪಂಚನಾಮೆ ಸಮಯ ಸ್ಥಳದಲ್ಲಿ ತೆಗೆದ ಛಾಯಾಚಿತ್ರ ನೋಡಿ

ಸಾಕ್ಷಿ ಅದರಲ್ಲಿ ತನ್ನ ಇರುವಿಕೆಯನ್ನು ಗುರುತಿಸಿದ್ದು, ಸದ್ರಿ ಛಾಯಾಚಿತ್ರವನ್ನು ನಿಪಿ-4 ಎಂದು ಗುರುತಿಸಲಾಯಿತು.

ದಿನಾಂಕಃ07-12-2020 ರಂದು ನಂತರ ನಾನು ಗಂಗೊಳ್ಳಿ ಪೋಲೀಸು ಠಾಣೆಗೆ ಹೋಗಿ ನನ್ನ ಮಗಳು ಉಪಯೋಗಿಸುತ್ತಿದ್ದ ಎರಡು ಸಿಮ್ ಗಳು ಇರುವ ಮೊಬೈಲ್ ಹಾಗೂ ನನ್ನ ಮಗಳು ಮತ್ತು 1 ನೇ ಆರೋಪಿಯ ನಿಶ್ಚಿತಾರ್ಥ ಸಮಯ ಛಾಯಾಚಿತ್ರಗಳನ್ನು ಹಾಗೂ ನಿಶ್ಚಿತಾರ್ಥದ ಆಮಂತ್ರಣ ಪತ್ರಿಕೆಯನ್ನು ಪೋಲೀಸರ ಮುಂದೆ ಹಾಜರುಪಡಿಸಿರುತ್ತೇನೆ. ಸದ್ರಿ ವಸ್ತುಗಳನ್ನು ಪೋಲೀಸರು ಪಂಚನಾಮೆ ಅಡಿ ಅಮಾನತುಪಡಿಸಿಕೊಂಡಿರುತ್ತಾರೆ. ಸದ್ರಿ ಪಂಚನಾಮೆ ನೋಡಿ ಸಾಕ್ಷಿ ಗುರುತಿಸಿದ್ದು, ಅದನ್ನು ನಿಪಿ-5 ಎಂದೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-5 ಎ ಎಂದು ಗುರುತಿಸಲಾಯಿತು.

ಸಾಕ್ಷಿ ನ್ಯಾಯಾಲಯದ ಮುಂದಿರುವ ರೆಡ್ಮಿ ಕಂಪೆನಿಯ ಮೊಬೈಲ್ ಫೋನ್ ನೋಡಿ ಗುರುತಿಸಿದ್ದು ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು. ನಿಶ್ಚಿತಾರ್ಥದ ಆಮಂತ್ರಣ ಪತ್ರಿಕೆಯನ್ನು ನೋಡಿ ಸಾಕ್ಷಿ ಗುರುತಿಸಿದ್ದು, ಅದನ್ನು ನಿಪಿ-6 ಎಂದು ಗುರುತಿಸಲಾಯಿತು. ಮತ್ತು ನಿಶ್ಚಿತಾರ್ಥ ಸಮಯ ತೆಗೆದ ಒಟ್ಟು 4 ಛಾಯಾಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದ್ರಿ 4 ಛಾಯಾಚಿತ್ರಗಳನ್ನು ಒಟ್ಟಾಗಿ ನಿಪಿ-7 ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಆರೋಪಿತರ ದುಷ್ಪ್ರೇರಣೆಯಿಂದಲೇ ನನ್ನ ಮಗಳು ಮೃತಪಟ್ಟಿರುತ್ತಾರೆ ಅಂತ ಹೇಳುತ್ತಾರೆ.

**ಪಾಟೀ ಸವಾಲುಃ** ಆರೋಪಿತರ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**